

## ಅಲ್ಲಿಗೆ ಹೋಗುವುದು ಹೇಗೆ?

ರೇಸ್ ವೇಳಾಪಟ್ಟಿಯ ಬಗ್ಗೆ ಮುಂಚಿತವಾಗಿ ತಿಳಿದುಕೊಳ್ಳುವುದು ಉತ್ತಮ. ರಂಜಾನ್ ತಿಂಗಳಲ್ಲಿ 'ಪಾಚು ಜಾವಿ' ನಡೆಯುವುದಿಲ್ಲ. ಪಶ್ಚಿಮ ಸುಮಾತ್ರಾದ ಪದಾಂಗ್‌ಗೆ ವಿಮಾನದಲ್ಲಿ ಹೋಗಬಹುದು. ಪದಾಂಗ್‌ನಲ್ಲಿ ಉಳಿಯಲು ಹೋಟೆಲ್ ಮತ್ತು ಹೋಂಸ್ಟೇಗಳಿವೆ. ಅಲ್ಲಿಂದ ಬಾಡಿಗೆ ವಾಹನದಲ್ಲಿ 'ಪಾಚು ಜಾವಿ' ನಡೆಯುವ ಸ್ಥಳಗಳಿಗೆ ಹೋಗಬಹುದು. 'ಪಾಚು ಜಾವಿ' ವೀಕ್ಷಣೆಗೆ ವಿದೇಶಿಯರಿಗೆ ತಲಾ 10 ಡಾಲರ್ ದರವನ್ನು ವಿಧಿಸಲಾಗುತ್ತದೆ.

ಹುಷಾರಾಗಿ ಇಟ್ಟುಕೊಳ್ಳದಿದ್ದಲ್ಲಿ ಚಿತ್ರದಲ್ಲಿನ ಕೆಸರು ಮೇಲೆ ಬಿದ್ದು ರಾಡಿಯಾಗಿಬಿಡುತ್ತದೆ. ಜಾತ್ರೆಯಂತಿರುವ ಇಲ್ಲಿನ ವಾತಾವರಣದಲ್ಲಿ ವಿವಿಧ ರೀತಿಯ ಅಂಗಡಿಗಳನ್ನು ತೆರೆಯಲಾಗಿರುತ್ತದೆ. ಗಾಳಿಪಟ ಸ್ಪರ್ಧೆಯನ್ನೂ ನಡೆಸುತ್ತಾರೆ. ತಿನಿಸುಗಳ ಮಾರಾಟ ಜೋರಾಗಿರುತ್ತದೆ.

'ಪಾಚು ಜಾವಿ' ನಡೆಸಲು ಸರ್ಕಾರ ಮತ್ತು ಸ್ಥಳೀಯ ಆಡಳಿತ ನೆರವು ನೀಡುತ್ತದೆ. ಕೃಷಿಕರ ಸಾಹಸ ಕ್ರೀಡೆಯಂತೆ ಕಂಗೊಳಿಸುವ ಅದರ ವೀಕ್ಷಣೆಗೆ ದೇಶ– ವಿದೇಶಗಳಿಂದ ಪ್ರೇಕ್ಷಕರು ಆಗಮಿಸುತ್ತಾರೆ. ಒಂದು ರೀತಿಯಲ್ಲಿ ಹಬ್ಬದ ಉತ್ಸವದಂತೆ ಕಳೆಗಟ್ಟುವ ಪಾಚು ಜಾವಿಯ ಅಂಕಣದ ಸುತ್ತ ಜನ ಜಾತ್ರೆ ನೆರೆದಿರುತ್ತದೆ. ಅವರ ಖುಷಿಯ ಬಯಕೆ ಈಡೇರಿಕೆಗೆ ಸಂಚಾರಿ ಅಂಗಡಿಗಳ ಸಂತೆ ಕೂಡ ತೆರೆದಿರುತ್ತದೆ. ಮಕ್ಕಳು– ಮರಿಗಳ ಕುತೂಹಲವನ್ನು ಕೆರಳಿಸುವ ಆಟಿಕೆಗಳೂ ಅಲ್ಲಿ ಬಿಕರಿಯಾಗುತ್ತಿರುತ್ತವೆ. ಅಲ್ಲಿನ ಗದ್ದೆ ಬಯಲಿನಲ್ಲಿ ನಮ್ಮ ಊರು– ಕೇರಿಗಳ ಜಾತ್ರೆಯ ಸೊಬಗು ಕಾಣಿಸುವಂತೆ ಭಾಸವಾಗುತ್ತದೆ.

ಕ್ರೀಡೋತ್ಸವವನ್ನು ನೋಡಿ ಆನಂದಿಸಲು ಬರುವ ಪ್ರೇಕ್ಷಕರಿಗೆ ಪ್ರವೇಶ ಶುಲ್ಕವನ್ನು ವಿಧಿಸಲಾಗುತ್ತದೆ. ಅಂಗಡಿಗಳನ್ನು ತೆರೆಯುವ ಸ್ಥಳೀಯರಿಗೂ ಒಳ್ಳೆಯ ವ್ಯಾಪಾರ ನಡೆಯುತ್ತದೆ. ಅದನ್ನು ಅಲ್ಲಿನ ಆಡಳಿತ ಕ್ರೀಡೆಗೆ ಮಾತ್ರ ಸೀಮಿತಗೊಳಿಸಿದೆ. ಅದರ ಪ್ರದರ್ಶನವೂ ಮನರಂಜನೆಗೆ ಎಂದಷ್ಟೇ ಮಾಡಲಾಗುತ್ತದೆ. ತಪ್ಪಿಯೂ ಸ್ಪರ್ಧೆಯ ಪೈಪೋಟಿಯನ್ನು ಏರ್ಪಡಿಸುವುದಿಲ್ಲ. ಒಂದು ವೇಳೆ ಸ್ಪರ್ಧೆಗೆ ಅವಕಾಶ ಕಲ್ಪಿಸಿದರೆ, ಅದು ಮತ್ತೆ ಬೇರೆ ಬೇರೆ ಆಯಾಮಗಳು ಪಡೆಯುತ್ತದೆ ಎನ್ನುವ ಭಯವಿದೆ. ಕ್ರೀಡೆಯ ಅಂಗಳ ಜೂಜಿನ ಅಡ್ಡೆಯಾಗುವ ಅಪಾಯವೂ ಇರುವುದರಿಂದ ಸ್ಪರ್ಧೆಯ ಸ್ಫೂರ್ತಿಯನ್ನು ನೀಡಿಲ್ಲ. ಆಟದ ಉಮೇದುದಾರರ ಉತ್ಸಾಹವನ್ನು ಹೆಚ್ಚಿಸುವ ದೃಷ್ಟಿಯಿಂದ ಆಕರ್ಷಕವಾಗಿ ಗೂಳಿ ಓಡಿಸಿದವರಿಗೆ ಬಹುಮಾನಗಳನ್ನು ನೀಡಿ ಪ್ರಶಂಸಿಸಲಾಗುತ್ತದೆ. ಆ ಸಂದರ್ಭದಲ್ಲಿ ಗೂಳಿಗಳ ಮಾರಾಟ, ಕೊಳ್ಳುವಿಕೆಗೂ ಉತ್ತಮ ಮಾರುಕಟ್ಟೆ ಎಂದು ಸ್ಥಳೀಯ ಕಿಮ್ ಹೇಳುತ್ತಾರೆ.